VIJAYAKUMAR KANNUR
Digitally signed by VIJAYAKUMAR KANNUR
Date: 2026.02.18 17:58:58 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 18.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ RSN ವಕೀಲರಿಂದ :**

ನನಗೆ ಈ ದಾವೆಯಲಿಲ ಸಾಕ್ಷಿ ನುಡಿಯುವಂತೆ ನ್ಯಾಯಾಲಯದಿಂದ ಸಾಕ್ಷಿ ಸಮನ್ಸ ಬಂದರುವುದಿಲ್ಲ. ವಾದಿಯರು ನನಗೆ ಸಾಕ್ಷಿ ನುಡಿಯುವಂತೆ ಹೇಳಿರುವುದರಿಂದ ನಾನು ಸಾಕ್ಷಿ ನುಡಿಯುತ್ತಿರುವೆನು. ಅವರು ನನಗೆ ಯಾವ ರೀತಿಯಾಗಿ ಸಾಕ್ಷಿ ನುಡಿಯುವಂತೆ ಹೇಳಿರುವರು ಎಂದರೆ ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುವೆನು.

2. ವಾದಿ 1 ರವರು ನನಗೆ ತಂಗಿಯಾಗಬೇಕು. ನನ್ನ ಊರು ಹುಲಕುಂದ ಗ್ರಾಮ. ವಾದಿಯರು ನನಗೆ ಸಂಬಂಧಿಯಾಗಿರುವುದರಿಂದ ಅವರ ಪರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ವಿನ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1 ವಿಗೆ ಒಬ್ಬ ಸಹೋದರಿ ಇರುವಳು. ಅವನಿಗೆ ಎಷ್ಟು ಜನ ಸಹೋದರರು ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ವಾದಿಯ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ಆದರೂ ಸಹ ನಾನು ವಾದಿಯರು ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಾದಿಯರು ಈ ದಾವೆಯನ್ನು ಪಾಲು ವಿಭಾಗ ಕೋರಿ ದಾಖಲು ಮಾಡಿರುವರು. ಆಸ್ತಿಗಳ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಕಿಲ್ಲಾ ಹೊಸಕೋಟಿ ಗ್ರಾಮದಲ್ಲಿ ಇರುವವು. ದಾವಾ ಆಸ್ತಿಗಳು ಪ್ರತಿವಾದಿ 1 ರವರಿಗೆ ಅವರ ತಂದೆಯಿಂದ ಬಂದಿರುವವು. ಈ ದಾವಾ ಆಸ್ತಿಗಳು ಪ್ರತಿವಾದಿ 1 ರವರ ತಂದೆಯ ಆಸ್ತಿಗಳಾಗಿರುವುದಿಲ್ಲ

ಅಂತ ಸೂಚಿಸುವುದು ಸರಿಯಲ್ಲ. ವಾದಿ 1 ವಿನ ಗಂಡ ಮೃತ ಪಟ್ಟ ನಂತರ ಪ್ರತಿವಾದಿಯರು ಅವರನ್ನು ತಮ್ಮ ಮನೆಯಲ್ಲಿ ಇಟ್ಟುಕೊಳ್ಳದೇ ಇರುವುದರಿಂದ ಈಗ ಅವಳು ತನ್ನ ತವರು ಮನೆಯಲ್ಲಿ ವಾಸವಾಗಿರುವಳು. ವಾದಿ 1 ರವರ ಹೆಸರಿನಲ್ಲಿ ಇರುವ ಆಸ್ತಿಯನ್ನು ಅವಳ ತಂದೆ ತನ್ನ ಹೆಸರಿನಲ್ಲಿ ಒತ್ತಾಯ ಪೂರಕವಾಗಿ ಬರೆಸಿಕೊಂಡಿರುವರು ಎಂದರೆ ಸರಿಯಲ್ಲ. ವಾದಿ 1 ರವರ ಹೆಸರಿನಲ್ಲಿ ಇರುವ ವಿಪಿಸಿ ಆಸ್ತಿಯನ್ನು ಮೋಸದಿಂದ ಖರೀದಿಗೆ ಕೊಟ್ಟಿರುವರು ಎಂದರೆ ಸರಿಯಲ್ಲ. ವಾದಿಯ ಕುಟುಂಬದ ಬಗ್ಗೆ ನನಗೆ ವೈಯಕ್ತಿಕವಾಗಿ ಯಾವುದೇ ಮಾಹಿತಿ ಇರುವುದಿಲ್ಲ, ಆದರೂ ಸಹಿತ ನಾನು ವಾದಿಯರ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ